ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014-15 ದಿನಾಂಕ: 26-08-2015

**ಪತ್ರಿಕಾ ಆಮಂತ್ರಣ**

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ರಾಜ್ಯ ರೈತರ ಆತ್ಮಹತ್ಯೆ – ಒಂದು ಅವಲೋಕನ ಕುರಿತು ಒಂದು ದಿನದ ಕಾರ್ಯಾಗಾರ.<br>ಉದ್ಘಾಟನೆ:<br>ಕೆ.ಆರ್. ರಮೇಶ್‌ಕುಮಾರ್, ಶಾಸಕ ಹಾಗೂ ವಿಧಾನಸಭೆಯ ಮಾಜಿ ಅಧ್ಯಕ್ಷ<br>ಸಮಾರೋಪ ಭಾಷಣ:<br>ಡಾ. ಹೆಚ್.ಎಸ್. ದೊರೆಸ್ವಾಮಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. | 27-08-2015 ಗುರುವಾರ ಬೆಳಗ್ಗೆ 10-00 ಗಂಟೆಗೆ | ಸಭಾಂಗಣ, ಕರ್ನಾಟಕ ವಿಶ್ವವಿದ್ಯಾನಿಲಯಗಳ ವಿಶ್ರಾಂತ ಕುಲಪತಿಗಳ ವೇದಿಕೆ, ಮೈಸೂರು ಬ್ಯಾಂಕ್ ಕೇಂದ್ರ ಕಚೇರಿ ಎದುರು, ಅರಮನೆ ರಸ್ತೆ, ಬೆಂಗಳೂರು. |
| 2. | "ನೂತನ ಜಿ.ಎಂ.ಪಿ ಲಸಿಕೆ ತಯಾರಿಕೆ ಸೌಲಭ್ಯದ" ಉದ್ಘಾಟನಾ ಸಮಾರಂಭ.<br>ಉದ್ಘಾಟನೆ:<br>ಟಿ.ಬಿ. ಜಯಚಂದ್ರ, ಕಾನೂನು ಸಂಸದೀಯ ವ್ಯವಹಾರ, ಪಶುಸಂಗೋಪನೆ ಹಾಗೂ ಮುಜರಾಯಿ ಇಲಾಖೆ.<br>ಅಧ್ಯಕ್ಷತೆ:<br>ಡಾ. ಸಿ. ರೇಣುಕಪ್ರಸಾದ್, ಉಪ ಕುಲಪತಿಗಳು, ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, | 27-08-2015 ಗುರುವಾರ ಬೆಳಗ್ಗೆ 10-00 ಗಂಟೆಗೆ | ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ, ಬೆಂಗಳೂರು – 560 024 |

| | | | |
|---|---|---|---|
| | ಸಂಪರ್ಕ: ಶಂಕರ್ – 9844287557 | | |
| 3. | ವಿಧಾನಸಭೆಯ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಪ್ರಾರಂಭಿಕ ಸಭೆ<br><br>ವಿ.ಸೂ: ಸಭೆಯ ಆರಂಭದ ಮೊದಲ ಮೂರು ನಿಮಿಷ ಮಾತ್ರ ಛಾಯಾಗ್ರಾಹಕರು ಹಾಗೂ ವಿದ್ಯುನ್ಮಾನ ಮಾಧ್ಯಮದ ಛಾಯಾಗ್ರಾಹಕರಿಗೆ ಚಿತ್ರೀಕರಣಕ್ಕೆ ಅವಕಾಶವಿದೆ. | 27-08-2015<br>ಗುರುವಾರ<br>ಬೆಳಗ್ಗೆ<br>11-00 ಗಂಟೆಗೆ | ಕೊಠಡಿ ಸಂಖ್ಯೆ 224,<br>ಎರಡನೇ ಮಹಡಿ,<br>ವಿಕಾಸಸೌಧ,<br>ಬೆಂಗಳೂರು. |
| 4. | ಕೇಂದ್ರ ಇಂಧನ ಖಾತೆ ಸಚಿವ ಶ್ರೀ ಪಿಯುಶ್ ಗೋಯಲ್ ಅವರ ರಾಜ್ಯ ಭೇಟಿ. | 27-08-2015<br>ಗುರುವಾರ<br>ಬೆಳಗ್ಗೆ<br>11-30 ಗಂಟೆಗೆ | ಕೊಠಡಿ ಸಂಖ್ಯೆ 334, ವಿಧಾನಸೌಧ, ಸಮ್ಮೇಳನ ಸಭಾಂಗಣ, ಬೆಂಗಳೂರು. |
| 5. | **'Pacific Asia Travel Association Travel' (PATA) curtain-raiser Media Interaction by :**<br><br>**R. V. Deshapande,**<br>**Large and Medium Scale Industries and Tourisum Minister.** | 27-08-2015<br>**Thursday at 12-30 Noon.** | **Hotel Lalith Ashok,**<br>**Kumarakrupa Road,**<br>**Bengaluru.** |
| 6. | ವಿಧಾನಮಂಡಲದ ಅಧೀನ ಶಾಸನ ರಚನಾ ಸಮಿತಿಯ ಪ್ರಾರಂಭಿಕ ಸಭೆ.<br><br>ಅಧ್ಯಕ್ಷತೆ:<br><br>ಡಾ. ಎ. ಬಿ. ಮಾಲಕರೆಡ್ಡಿ,<br>ಸಮಿತಿಯ ಅಧ್ಯಕ್ಷರು.<br><br>ವಿ.ಸೂ: ಸಭೆಯ ಆರಂಭದ ಮೊದಲ ಮೂರು ನಿಮಿಷ ಛಾಯಾಗ್ರಾಹಕರು ಹಾಗೂ ವಿದ್ಯುನ್ಮಾನ ಮಾಧ್ಯಮದ ಛಾಯಾಗ್ರಾಹಕರಿಗೆ ಚಿತ್ರೀಕರಣಕ್ಕೆ ಅವಕಾಶವಿದೆ. | 27-08-2015<br>ಗುರುವಾರ<br>ಮಧ್ಯಾಹ್ನ<br>3-00 ಗಂಟೆಗೆ | ಕೊಠಡಿ ಸಂಖ್ಯೆ 110,<br>ಮೊದಲನೇ ಮಹಡಿ,<br>ವಿಧಾನಸೌಧ,<br>ಬೆಂಗಳೂರು. |
| 7. | **Locarno** – ಪ್ರತಿಷ್ಠಿತ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಎರಡು ಪ್ರಶಸ್ತಿಗಳಿಗೆ ಭಾಜನರಾದ ಕನ್ನಡ ಚಲನಚಿತ್ರ "ತಿಥಿ" ನಿರ್ದೇಶಕ ರಾಮರೆಡ್ಡಿ ಅವರಿಗೆ ಅಭಿನಂದನಾ ಸಮಾರಂಭ: | 27-08-2015<br>ಗುರುವಾರ<br>ಸಂಜೆ<br>4-00 ಗಂಟೆಗೆ | ಸಭಾಂಗಣ, ವಾರ್ತಾಸೌಧ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಭಗವಾನ್ ಮಹಾವೀರ ರಸ್ತೆ.<br>ಬೆಂಗಳೂರು |

| | | | |
|---|---|---|---|
| | **ಆಯೋಜಕರು:**<br><br>**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿ,** | | |

**ನಿರ್ದೇಶಕರ ಪರವಾಗಿ**

**ಪತ್ರಿಕಾ ಪ್ರಕಟಣೆ**

# ಬಿದಿರಿನ ಭಾವಣಿ ಹಾಗೂ ಹಲಗೆ ತಯಾರಿಸಿದ ಸಂಶೋಧನಾ ಸಂಸ್ಥೆ

**ಬೆಂಗಳೂರು, ಆಗಸ್ಟ್ 26, (ಕರ್ನಾಟಕ ವಾರ್ತೆ)**

ಭಾರತೀಯ ಪ್ಲೈವುಡ್ ಉದ್ಯಮದ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯು ಹೊಸದಾಗಿ ಮೂರು ವಿನ್ಯಾಸದ ಬಿದಿರು ಭಾವಣಿ ಹಾಗೂ ಬಿದಿರು ಚಾಪೆಯ ಹಲಗೆಯನ್ನು ತಯಾರಿಸಿದೆ ಎಂದು ಸಂಸ್ಥೆಯ ನಿರ್ದೇಶಕರಾದ ಡಾ ಬಿ.ಎನ್ ಮೊಹಂತಿ ಅವರು ತಿಳಿಸಿದರು.

ಇಂದು ಸಂಸ್ಥೆಯಲ್ಲಿ ದಕ್ಷಿಣ ಭಾರತ ಪ್ಲೈವುಡ್ ಉತ್ಪಾದಕರ ಒಕ್ಕೂಟದವರ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಸಂವಾದ ಕಾರ್ಯಕ್ರಮದ ನಂತರ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿ ಅವರು ಇದುವರೆವಿಗೆ ಸಂಸ್ಥೆಯಿಂದ ನವೀಕರಿಸಲ್ಪಡುವ 14 ಉತ್ಪನ್ನಗಳನ್ನು ತಯಾರಿಸಲಾಗಿದ್ದು, ಇದೀಗ ಇನ್ನೂ ನಾಲ್ಕು ಉತ್ಪನ್ನಗಳನ್ನು ಸಂಶೋಧಿಸಿ ತಯಾರಿಸಲಾಗಿದೆ ಎಂದರು.

ಇಂದು ದಕ್ಷಿಣ ಭಾರತ ಪ್ಲೈವುಡ್ ಉತ್ಪಾದಕರ ಒಕ್ಕೂಟದ ವತಿಯಿಂದ ನಡೆದ ಸಂವಾದದಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಪ್ಲೈವುಡ್ ಉತ್ಪಾದಕರು ಸೇರಿದಂತೆ 60 ಪ್ರತಿನಿಧಿಗಳು ಭಾಗವಹಿಸಿ ಬಿದಿರು ತಂತ್ರಜ್ಞಾನದ ಬಳಕೆಯ ಬಗ್ಗೆ ಹಾಗೂ ಪ್ಲೈವುಡ್ ಉದ್ಯಮವು ಅನುಭವಿಸುತ್ತಿರುವ ಸಮಸ್ಯೆಗಳು ಮತ್ತು ಪ್ಲೈವುಡ್ ಮತ್ತು ಸಾಮಿಲ್ಲುಗಳಿಗೆ ಲೈಸೆನ್ಸ್ ಪಡೆಯುವ ವಿಚಾರವಾಗಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲಾಯಿತೆಂದು ಅವರು ತಿಳಿಸಿದರು.

ನೀಲಗಿರಿ ಮರಗಳಿಂದ ಭೂಮಿಯ ಫಲವತ್ತೆಗೆ ಹಾನಿಯಾಗುವುದನ್ನು ತಪ್ಪಿಸಲು ನೀಲಗಿರಿ ಮರಗಳ ಬದಲಿಗೆ ಕಾಡು ಬೇವು ಮರಗಳನ್ನು ಕಾಡಿನಲ್ಲಿ ಬೆಳೆಸಲು ಉದ್ದೇಶಿಸಲಾಗಿದೆ. ಹಾಗೆಯೇ ಸಿಮೆಂಟ್ ಶೀಟಿನ ಧೂಳಿನ ಕಣಗಳಿಂದ ಶ್ವಾಸಕೋಶದ ಕ್ಯಾನ್ಸರ್ ನಂತಹ ಕಾಯಿಲೆಗಳಿಗೆ ಕಾರಣವಾಗುವುದರಿಂದ ಬಿದಿರಿನಿಂದ ತಯಾರಿಸಲಾಗಿರುವ ಭಾವಣಿಯು ಪರಿಸರ ಸ್ನೇಹಿ ಭಾವಣಿಯಾಗಿದ್ದು ಕಡಿಮೆ ಉಷ್ಣದ ವಾಹಕತೆಯನ್ನು ಹೊಂದಿರುವುದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುವುದಿಲ್ಲ. ಸುಮಾರು 25 ವರ್ಷ ಬಾಳಿಕೆ ಬರುವ ಬಿದಿರು ಚಾವಣೆಯನ್ನು ಭಾರತೀಯ ರೈಲ್ವೆ ಅವರು ರೈಲ್ವೆ ಫ್ಲಾಟ್ ಫಾರಂ ನಿರ್ಮಿಸಲು ಮುಂದಾಗಿದ್ದಾರೆ ಎಂದರು.

ಅದೇ ರೀತಿ ಬಿದಿರಿನಿಂದ ತಯಾರಿಸಲಾಗಿರುವ ಹಲಗೆಗಳಿಂದ ಗೃಹಪಯೋಗಿ ಪೋಠೋಪಕರಣಳನ್ನು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಧಾನ್ಯಗಳ ಶೇಕರಣೆಗೆ ಪೆಟ್ಟಿಗೆಗಳನ್ನು ತಯಾರಿಸಲಾಗಿದ್ದು, ಈ ಬಿದಿರು ಹಲಗೆಯ ಬೆಲೆಯು ಪ್ಲೈವುಡ್ ಬೆಲೆಗಿಂತ ಶೇಕಡ 15% ರಷ್ಟು ಕಡಿಮೆಯಾಗಿರುವುದರಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಇದರ ಬಳಕೆಯನ್ನು ಮಾಡಿದಲ್ಲಿ ಪರಿಸರ ನೈರ್ಮಲ್ಯವನ್ನು ಕಾಪಾಡಬಹುದಾಗಿದೆ ಎಂದು ನಿರ್ದೇಶಕರು ಅಭಿಪ್ರಾಯಪಟ್ಟರು.

ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ವಿಜ್ಞಾನಿಗಳಾದ ಡಿ.ಎನ್. ಉದಯ್, ಮತ್ತು ಸುಜಾತ ಅವರು ಉಪಸ್ಥಿತರಿದ್ದರು.

ಪಲ್ಲವಿ:ಪೂರ್ಣಿಮ

## ನಕಲಿ ಔಷಧ ಸರಬರಾಜು : 3 ವರ್ಷ ಶಿಕ್ಷೆ

ಬೆಂಗಳೂರು, ಆಗಸ್ಟ್ 25 (ಕರ್ನಾಟಕ ವಾರ್ತೆ)

ಮೆ: ಪಿ.ಕೆ. ಫಾರ್ಮ, ಅಂಗಡಿ ಸಂ. 2, ಜಿ.ಬಿ. ಗಲ್ಲಿ, ಕಾಟನ್ ಪೇಟೆ, ಬೆಂಗಳೂರು – 53 ಸಂಸ್ಥೆಯ ಮಾಲೀಕರಾದ ಕುಶಾಲ್ ಚಂದ ಅಲಿಯಾಸ್ ಕುಸಾಲ್ ಚಂದ್ ಗಾಂಧಿ ರವರು ನಕಲಿ ಔಷಧಿಗಳಾದ, Diclofenac Sodium Injection ಮತ್ತು Sterile Water for Injection ಈ ಔಷಧಗಳನ್ನು ವಿವಿಧ ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಿದ್ದರಿಂದ ಔಷಧ ನಿಯಂತ್ರಣಾ ಇಲಾಖೆಯ ಅಧಿಕಾರಿಗಳು ತನಿಖೆ ಕೈಗೊಂಡು ಔಷಧ ಮತ್ತು ಕಾಂತಿವರ್ಧಕ ಅಧಿನಿಯಮದ ಉಲ್ಲಂಘನೆಗೆ ಮೊಕದ್ದಮೆಯನ್ನು ಹೂಡಿದ ಮೇರೆಗೆ ವಿಶೇಷ ಆರ್ಥಿಕ ಅಪರಾಧಗಳ ನ್ಯಾಯಾಲಯ, ಬೆಂಗಳೂರು ಸಿ. ಸಿ. ಸಂಖ್ಯೆ: 632/2003 ಇಲ್ಲಿ ಆರೋಪಿಯನ್ನು ನಿರ್ದೋಷಿಯೆಂದು ಬಿಡುಗಡೆ ಮಾಡಿದ ವಿರುದ್ದ ಇಲಾಖೆಯು ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಕ್ಕೆ ಉಚ್ಚ ನ್ಯಾಯಾಲಯವು ಕೆಳ ನ್ಯಾಯಾಲಯಕ್ಕೆ ತೀರ್ಪಿನ ಮರು ವಿಚಾರಣೆ ನಡೆಸಲು ಆದೇಶಿಸಿದ ಹಿನ್ನೆಲೆಯಲ್ಲಿ ಕೆಳ ನ್ಯಾಯಾಲಯವು ಮರು ವಿಚಾರಣೆ ನಡೆಸಿ ಸದರಿ ಆರೋಪಿಗೆ 3 ವರ್ಷ ಕಠಿಣ ಶಿಕ್ಷ ಮತ್ತು 20 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿರುತ್ತಾರೆ.

ಈ ಪ್ರಕರಣದಲ್ಲಿ ಅಂದಿನ ರಕ್ತ ನಿಧಿ ಮತ್ತು ಗುಪ್ತವಾರ್ತೆ ವಿಭಾಗದ ಔಷಧ ಪರಿವೀಕ್ಷಕರಾದ ಸಂಗಣ್ಣ ಎಸ್. ಶೀಲಿ ರವರು ಔಷಧ ನಿಯಂತ್ರಕರ ಮೇಲ್ವಿಚಾರಣೆಯಲ್ಲಿ ಬೆಂಗಳೂರು ಮತ್ತು ಒರಿಸ್ಸಾ ರಾಜ್ಯದಲ್ಲಿ ತನಿಖೆ ನಡೆಸಿ ಮೊಕದ್ದಮೆ ದಾಖಲಿಸಿದ್ದರು.

ಪಲ್ಲವಿ:ಬಾಬು:ಜಿಪಿಆರ್.

## ಈ ವಾರದ ಬೆಳ್ಳಿಸಿನಿಮಾ–ಬೆಳ್ಳಿಮಾತು:<br>"ಹಾಡುಹಕ್ಕಿ ಹಾಡು" ಚಲನಚಿತ್ರ ಪ್ರದರ್ಶನ, ಸಂವಾದ

ಬೆಂಗಳೂರು, ಆಗಸ್ಟ್ 26 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಪ್ರತಿ ಶನಿವಾರ ನಡೆಸುವ ಬೆಳ್ಳಿಸಿನಿಮಾ–ಬೆಳ್ಳಿಮಾತು ಕಾರ್ಯಕ್ರಮದಡಿ ಆಗಸ್ಟ್ 28 ರ ಶನಿವಾರದಂದು ಬೆಳ್ಳಿ ಸಿನಿಮಾ "ಹಾಡುಹಕ್ಕಿ ಹಾಡು" ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಈ ಚಿತ್ರದ ನಿರ್ದೇಶಕ ವಿ. ನಾಗೇಂದ್ರ ಶಾ ಅವರಿಂದ ಬೆಳ್ಳಿಮಾತು ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಬೆಂಗಳೂರು ಮಿಲ್ಲರ್ಸ್ ರಸ್ತೆಯ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಆಗಸ್ಟ್ 28 ರಂದು ಸಂಜೆ 4–00 ಗಂಟೆಗೆ ನಡೆಯುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್. ವಿ. ರಾಜೇಂದ್ರ ಸಿಂಗ್ ಬಾಬು ಅವರು ವಹಿಸುವರು. ಹಿರಿಯ ಸಾಹಿತಿ ಗೋಪಾಲ ವಾಜಪೇಯಿ, ಪರಿಸರ ಚಿಂತಕ ಸುಧೀಂದ್ರ ಹಾಲ್ದೊಡ್ಡೇರಿ ಹಾಗೂ ಚಿತ್ರ ನಿರ್ಮಾಪಕ ಯಶವಂತ ಸರದೇಶಪಾಂಡೆ ಅವರು ಪಾಲ್ಗೊಳ್ಳುವರು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಲ್ಲವಿ:ಬಾಬು:ಜಿಪಿಆರ್.

## THREE YEARS RIGOROUS IMPRISONMENT

**Bengaluru, Aug 26th (Karnataka Information)**

**The Special Court of Economic Offences, Bengaluru has convicted. Sri Kushal Chand Alias Kushal Chand Gandhi, Proprietor of M/s P.K Pharma No. 25, Shop No. 2, G.B. Galli, Cottonpet, Bengaluru – 53 in the case C.C. No. 632/2003 for the supply of Spurious Diclofenac Sodium Injection and Sterile Water for Injection to various Government Hospitals in the State and sentenced for three years rigorous imprisonment and imposed the fine of Rs. 20,000/-. After the retrial order of the Hon'ble High Court.**

**The then Drugs Inspector, Blood Bank and Intelligence Sri Sanganna S. Sheeli, under supervision of the Drugs Controller, investigated at Bengaluru and Orissa and filed the case against the accused.**

**Pallavi:babu:gpr.**

## ಕಚೇರಿ ಸ್ಥಳಾಂತರ

**ಬೆಂಗಳೂರು, ಆಗಸ್ಟ್ 26 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರ ಎರಡನೇ ಹೆಚ್ಚುವರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಕಚೇರಿಯನ್ನು ಶಾಂತಿನಗರದ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ ಕಟ್ಟಡದ ಒಂದನೇ ಮಹಡಿಗೆ ಸ್ಥಳಾಂತರಿಸಲಾಗಿದೆ.

ಪಲ್ಲವಿ:ಬಾಬು:ಜಿಪಿಆರ್.